

ಹಿಡಿದರೆ ತನ್ನನ್ನು ಕೇಳುವವರಾರು? ಈಗ ಇರುವ ಜೋಪಡಿಗಳನ್ನೆಲ್ಲ ನೆಲಸಮ ಮಾಡಿ, ಅಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಫ್ಲ್ಯಾಟ್‌ಗಳನ್ನು ಮಾಡಬಹುದು. ಸ್ಲಮ್‌ನ ಜನಗಳಿಗೆ ಅಷ್ಟೋ ಇಷ್ಟೋ ಕೊಟ್ಟರಾಯಿತು. ಅವರು ಬೇರೊಂದು ಕಡೆ ಸ್ಲಮ್ ನಿರ್ಮಿಸುತ್ತಾರೆ. ಮುಂದೆ ಅವರ ಪುನರ್ವಸತಿಗಾಗಿ ಕಟ್ಟಡ ನಿರ್ಮಾಣ ಕಾರ್ಪೊರೇಶನ್ ಅಧಿಕಾರಿಗಳಿಗೆ ಕೈ ಬೆಚ್ಚಗಾಗುವಂತೆ ಹಣ ನೀಡಿದರೆ ಅವರೂ ತನ್ನ ಗೊಡವೆಗೆ ಬರುವುದಿಲ್ಲ. ಒಮ್ಮೆ ಈ ಎಲೆಕ್ಷನ್‌ನಲ್ಲಿ ಗೆಲ್ಲಬೇಕು. ತನ್ನ ಚಿಲ್ಲರೆ ಕೆಲಸಗಳಾದ ಡ್ರಗ್ ದಂಧೆ, ಮಧ್ಯಪೂರ್ವ ರಾಷ್ಟ್ರಗಳಿಗೆ ಹೆಣ್ಣುಗಳ ಪೂರೈಕೆ, ವೇಶ್ಯಾಗೃಹಗಳ ಯಜಮಾನಿಕೆ, ಕಳ್ಳ ಭಟ್ಟಿ ದಂಧೆ ಎಲ್ಲ ನಿಲ್ಲಿಸಿ ಸಾಚಾ ರಾಜಕಾರಣಿಯಾಗಿ ವಿಜೃಂಭಿಸಬಹುದು. ಒಮ್ಮೆ ಈ ಮುದುಕ ಆಸ್ಪತ್ರೆಯಲ್ಲೆ ಅಸುನೀಗಿದರೆ ಅನುಕಂಪದ ಅಲೆಯ ಮೂಲಕ ತಾನು ಗೆಲ್ಲಬಹುದು. ಎಷ್ಟಾದರೂ ಆ ಮುದುಕನ ದತ್ತುಪುತ್ರನಲ್ಲವೆ? — ಸುಭಾಷ್ ವಾಘ್ಮೊರೆ ಕನಸು ಕಾಣುತ್ತಿದ್ದ.

ಆದರೆ, ಸುಭಾಷ್ ವಾಘ್ಮೊರೆಗೆ ತಿಳಿಯದ ವಿಷಯಗಳು ಬಹಳವಿದ್ದವು. ಅಪ್ಪಾ ಸಾಹೇಬರು, ಕಾನೂನು ಪ್ರಕಾರ ಆತನನ್ನು ದತ್ತು ತೆಗೆದುಕೊಂಡಿರಲಿಲ್ಲ. ಅವನು ವಾಸವಾಗಿರುವ ಸಣ್ಣ ಬಂಗಲೆಯನ್ನು ಮಾತ್ರ ಅವನ ಹೆಸರಿಗೆ ಬರೆಸಿದ್ದು, ಅವರ ಸಮಸ್ತ ಆಸ್ತಿಪಾಸ್ತಿ ಹಣವನ್ನು ಪಾರ್ಸಿ ಪಂಚಾಯತ್‌ಗೆ ವರ್ಗಾಯಿಸಿ, ತಮ್ಮ ಎಲ್ಲ ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ಆಸ್ಪತ್ರೆಗಳನ್ನು ಪಂಚಾಯತ್ ನಡೆಸತಕ್ಕದ್ದೆಂದು ಮೃತ್ಯುಪತ್ರ ಮಾಡಿಸಿದ್ದರು. ತಾನು ಸತ್ತ ಬಳಿಕ ಕಳೇಬರವನ್ನು ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಒಪ್ಪಿಸಬೇಕೆಂದೂ ನಮೂದಿಸಿದ್ದರು.

ಚುನಾವಣಾ ಪ್ರಚಾರ ಮುಗಿಯಲು ಎರಡು ದಿನಗಳಿದ್ದಾಗ ವಾರ್ಡ್‌ನ ಎಲ್ಲಾ ಕಡೆ, ''ಅಗಲಿದ ಅಪ್ಪಾ ಸಾಹೇಬರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಕೊನೆಯಾಸೆಯಂತೆ ನಿಮ್ಮ ಶುಭ ಚಿಂತಕ ಹಾಗೂ ಅಪ್ಪಾ ಸಾಹೇಬರ ವಾರಸುದಾರ ಶ್ರೀ ಸುಭಾಷ್ ವಾಘ್ಮೊರೆಯನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿ'' ಎನ್ನುವ ಪೋಸ್ಟರುಗಳು ರಾರಾಜಿಸಿದವು. ದಿಗಿಲುಬಿದ್ದ ಪರಮೇಶ್ವರ ಹೆಗಡೆ ಆಸ್ಪತ್ರೆಗೆ ಧಾವಿಸಿದಾಗ ಆತ ಕಂಡದ್ದು ಉಲ್ಲಸಿತರಾಗಿದ್ದ ಅಪ್ಪಾ ಸಾಹೇಬರು ತನ್ನ ಇಷ್ಟದ ಕೊತ್ತಂಬರಿ ಕಷಾಯ ಕುಡಿಯುತ್ತಿದ್ದುದನ್ನು. ಮನುಷ್ಯ ಇಷ್ಟು ಹೀನಾಯವಾಗಿ ವರ್ತಿಸಬಹುದೆ ಎನ್ನುವ ಪ್ರಶ್ನೆ ಹೆಗಡೆಗೆ ಕಾಡಿತು. ತಾನು ಕೊನೆಯ ಕ್ಷಣದಲ್ಲಿ ತನ್ನ ಉಮೇದುವಾರಿಕೆ ಹಿಂಪಡೆಯಬಹುದೆ ಎಂದು ಯೋಚಿಸಿದವನು ಅಪ್ಪಾ ಸಾಹೇಬರ ನಿಷ್ಕಲ್ಮಶ ನಗುಮುಖ ನೋಡಿ ತನ್ನ ವಿಚಾರ ಬದಲಿಸಿದ.

### ವ್ಯಾಸರಾವ್ ನಿಂಜೂರ್

ವಿಜ್ಞಾನಿ–ಸಂಶೋಧಕ, ಪ್ರಾಧ್ಯಾಪಕ ಮತ್ತು ಕತೆಗಾರ, ಕಾದಂಬರಿಕಾರ ವ್ಯಾಸರಾವ್ ನಿಂಜೂರ್ ಪ್ರಸ್ತುತ ಮುಂಬಯಿಯಲ್ಲಿ ನೆಲೆಸಿದ್ದಾರೆ. ಅವರು ಮೂಲತಃ ಉಡುಪಿಯ ತೆಂಕನಿಡಿಯೂರಿನವರು.

ನಿಂಜೂರರ ಪ್ರಕಟಿತ ಕೃತಿಗಳು: 'ಕುಂಕುಮ', 'ಮಂಚ', 'ದೂಜ ಮಾಸ್ತರರ ಮಗಳು ಬಸಿರಾದುದು' (ಕಥಾಸಂಕಲನಗಳು), 'ಉಸಿರು', 'ಚಾಮುಂಡೇಶ್ವರಿ ಭವನ', 'ತೆಂಕನಿಡಿಯೂರಿನ ಕುಳುವಾರಿಗಳು' (ಕಾದಂಬರಿಗಳು), 'ಆಗಾಗ ಅನಿಸಿದ್ದು' (ಅಂಕಣ ಬರಹಗಳು), 'ನಲವತ್ತರ ನಲುಗು' (ನಾಟಕ), 'ಎಳೆದ ತೇರು' (ಸಂಕ್ಷಿಪ್ತ ಆತ್ಮಕಥನ). ಬರವಣಿಗೆಯ ಜೊತೆಗೆ ವಿಜ್ಞಾನ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪತ್ರಿಕೆಗಳ ಸಂಪಾದಕರಾಗಿಯೂ ಕ್ರಿಯಾಶೀಲರು.